ಹೊಳೆನರಸೀಪುರದಲ್ಲಿ ರೈತಮಹಿಳೆಯಾಗಿ ಜೀವನಾನುಭವ ದಕ್ಕಿಸಿಕೊಂಡಿರುವ ಉಷಾ ನರಸಿಂಹನ್ ಸಾಹಿತ್ಯ ಕ್ಷೇತ್ರದಲ್ಲಿಯೂ ವಿಪುಲವಾದ ಕೃಷಿ ಮಾಡಿದವರು. ಹುಟ್ಟಿದ್ದು ಶಿವನಸಮುದ್ರದಲ್ಲಿ. ಕಥೆ, ಕಾದಂಬರಿ, ಪ್ರಬಂಧ, ಬಾನುಲಿ ನಾಟಕಗಳನ್ನು ಬರೆದಿದ್ದಾರೆ. ಕನ್ನಡದ ಭಾವಗೀತೆ ಆಲಿಸುವುದು, ನಿರಂತರ ಓದು ಅವರಿಗಿಷ್ಟವಾದ ವಿಷಯ. ಪ್ರಸ್ತುತ ಮೈಸೂರು ನಿವಾಸಿ.

'ನಿಂಗೆ ಯಾವ ಸ್ಟ್ರೆಸ್ಸೂ ಇಲ್ಲ. ಯೂ ಆರ್ ಟೋಟಲಿ ಇನ್‌ಎಫಿಶಿಯಂಟ್ ಅಷ್ಟೆ. ಅಮ್ಮಾನು ಟೀಚರ್ ಆಗಿದ್ಲು. ಯಾವತ್ತು ಮನೆಯವರು ಮನೆ ಕೆಲಸ ಮಾಡಬೇಕು ಅಂತ ಎಕ್ಸ್‌ಪೆಕ್ಟ್ ಮಾಡ್ತಿರಲಿಲ್ಲ. ಸ್ಕೂಲಿಂದ ಮನೆಗೆ ಬಂದು ರಾತ್ರಿಯಡಿಗೆ ಮಾಡಿ, ಮಕ್ಕಳ ಹೋಮ್‌ವರ್ಕ್ ಮಾಡಿಸಿ, ಎಲ್ಲರಿಗೂ ಬಡಿಸಿ ಮಲಗೋಳು. ಬೆಳಿಗ್ಗೆ ಐದು ಗಂಟೆಗೆ ಎದ್ದು ಬಾಗಿಲಿಗೆ ನೀರು ಹಾಕೋದ್ರಿಂದ ಹಿಡಿದು ಮನೆ ಕೆಲಸ, ತಿಂಡಿ, ಎಲ್ಲರಿಗೂ ಡಬ್ಬಿ ಕಟ್ಟುವುದು... ಎಲ್ಲಾ ಮಾಡೋಳು. ತಾನು ಶಾಲೆಗೆ ಹೋಗೋಳು. ಮನೆ ಕೆಲಸಕ್ಕು ಯಾರನ್ನು ಇಟ್ಟುಕೊಂಡಿರಲಿಲ್ಲ. ನಿಂಗೆ ಬ್ಯಾಲೆನ್ಸ್ ಮಾಡಕ್ಕಾಗಲ್ಲ. ಅದನ್ನ ಒಪ್ಕೋ' ಎಂದವನನ್ನು ಇರಿಯುವಂತೆ ನೋಡುತ್ತಾ 'ನಿಮ್ಗೆ ಯಾವತ್ತೂ ನಾನು ಅರ್ಥ ಆಗಲ್ಲ. ನನ್ನ ಪರಿಸ್ಥಿತೀನೂ ಗೊತ್ತಾಗಲ್ಲ. ನಿಮ್ಮಮ್ಮ ಸ್ಕೂಲ್ ಟೀಚರ್ರು. ನಾಲ್ಕುವರೆಗೆ ಸ್ಕೂಲ್ ಮುಗಿದರೆ ಐದುವರೆಗೆಲ್ಲ ಮನೆಗೆ ಬರಬಹುದಾಗಿತ್ತು. ನನ್ನ ಹಾಗೆ ಏಳೂವರೆಗೆ ಲಾಗ್‌ಔಟ್ ಆಗಿ ಒಂಬತ್ತಕ್ಕೆ ಮನೆಗೆ ಬರುವ ಪರಿಸ್ಥಿತಿ ನಿಮ್ಮಂಗೆ ಇರಲಿಲ್ಲ. ಆದ್ದರಿಂದಲೇ ಅವರಿಗೆ ನನ್ನ ಕಷ್ಟ ಗೊತ್ತಾಗಲ್ಲ. ನಿಮ್ಮಮ್ಮಂಗೇನೋ ನನ್ನ ವರ್ಕ್ ಪ್ರೆಶರ್ ಅರ್ಥ ಆಗಲ್ಲ ಅಂದ್ರೆ ಪರವಾಗಿಲ್ಲ. ನಿಮಗೂ' ಅಂದವಳನ್ನು ತರುಬುತ್ತಾ 'ಥತ್... ನಿಂಜೊತೆ ಯಾರು ಈ ರಾತ್ರೀಲಿ ಆರ್ಗ್ಯೂ ಮಾಡ್ತಾರೆ' ಎಂದು ಸಿಡುಕಿ ಕಿವಿಯವರೆಗೂ ರಗ್ಗೆಳೆದುಕೊಂಡು ಲೈಟು ಸ್ವಿಚ್ ಆಫ್ ಮಾಡಿದ. ದಿಂಬು ತೋಯಿಸುತ್ತಾ ತೋಯಿಸುತ್ತಾ ಯಾವಾಗ ನಿದ್ರೆಗೆ ಜಾರಿದಳೋ ಅವಳಿಗೇ ಗೊತ್ತಿರಲಿಲ್ಲ. ಮರುದಿನ ಲಂಚ್ ಬ್ರೇಕಲ್ಲಿ ಉಪ್ಪಿಟ್ಟಿನ ಡಬ್ಬಿ ತೆಗೆದು ತಿನ್ನುತ್ತಾ ರಾಗಿಣಿಗೆ ಫೋನ್ ಮಾಡಿದಳು. ನೆನ್ನೆಯ ಆಫೀಸಿನ ವಿದ್ಯಮಾನಗಳನ್ನೆಲ್ಲ ಹೇಳಿಕೊಂಡು ಮತ್ತೊಮ್ಮೆ ಕಣ್ಣೀರಾದಳು. ಅವಳೆಲ್ಲ ದುಗುಡಗಳನ್ನು ಕೇಳಿಸಿಕೊಂಡು ತುಸು ಸಾಂತ್ವನಿಸುವ ಗೆಳತಿ ರಾಗಿಣಿ ಹೃದಯಕ್ಕೆ ಯಾವತ್ತು ಹತ್ತಿರ. ಎಷ್ಟೋ ವೇಳೆ ಆಪ್ತ ಸಮಾಲೋಚಕಿಯಾಗಿ ಸಲಹೆ, ಸಾಂತ್ವನ ಕೊಡುವ ರಾಗಿಣಿಯಲ್ಲದೆ ಇನ್ಯಾರಲ್ಲು ಏನನ್ನು ಹೇಳಿಕೊಳ್ಳುವವಳಲ್ಲ ಪ್ರಿಯಾ. ಕೇವಲ ಆಫೀಸಿನ ಸಂಗತಿಯಲ್ಲ... ತನ್ನ ವೈಯಕ್ತಿಕ ಕುಟುಂಬ ವಿಷಯಗಳನ್ನು ಶೇರ್ ಮಾಡಿಕೊಳ್ಳುವಷ್ಟು ಅವಳಲ್ಲಿ ಸಲುಗೆ.

ಈ ದಿನ ರಾಗಿಣಿಯಿಂದಲೂ ನಿರೀಕ್ಷಿತ ಸಹಾನುಭೂತಿ ವ್ಯಕ್ತವಾಗಲಿಲ್ಲ. 'ಪ್ರಿಯಾ, ನೀನು ತುಂಬ ಫ್ರೆಜೈಲ್ ಆಗಿದೀಯ, ತುಸು ಮನಸ್ಸು ದೃಢ ಮಾಡಿಕೋ. ಲೈಫ್ ಈಸ್ ಲೈಕ್ ದಟ್. ನೀನು ಬದುಕು ಇರುವ ಹಾಗೆ ಸ್ವೀಕರಿಸಬೇಕು. ಇಟ್ ಈಸ್ ನೆವರ್ ಎ ಬೆಡ್ ಆಫ್ ರೋಸಸ್ ಯು ನೋ... ನಿನಗೆ ಲಕ್ಷ ಲಕ್ಷಗಳಲ್ಲಿ ಹಣಕೊಡುವ ಸಂಸ್ಥೆ ನಿನ್ನಿಂದ ಅಂಥದ್ದೇ ಸರ್ವಿಸ್ ನಿರೀಕ್ಷಿಸುತ್ತೆ. ಸಂಸ್ಥೆಯ ಕ್ಲಯಿಂಟ್‌ಗಳ ನಿರೀಕ್ಷೆಗನುಗುಣವಾಗಿ ನಾವು ಕೆಲಸ ಮಾಡಬೇಕಾಗುತ್ತೆ. ಹಂಗೇ ಹೋಮ್ ಫ್ರಂಟಲ್ಲು ವುಮನ್‌ಆಫ್ ದಿ ಹೌಸ್ ಆಗಿರ್ತೀವಿ. ಅಲ್ಲೂ ನಿರೀಕ್ಷೆಗಳಿರ್ತಾವೆ. ಎರಡನ್ನು ಕೋಪ್-ಅಪ್ ಮಾಡಿ ತೂಗಿಸಬೇಕು. ಮನೆಯ ತಾಪತ್ರಯ ಆಫೀಸಲ್ಲು, ಆಫೀಸಿನ ಪ್ರೆಶರ್ ಮನೇಲೂ ತಗೊಂಡು ಹೋಗಬಾರದು. ಓನ್ಲಿ ಥಿಂಗ್ ನಿನ್ನ ಎಫಿಶಿಯನ್ಸಿ ಜಾಸ್ತಿ ಮಾಡ್ಕೋಬೇಕು. ಸ್ವಲ್ಪ ಸ್ಟ್ರೆಸ್ ತಗೋಬೇಕು. ಓವರ್‌ಟೈಮ್ ಮಾಡದೆ ವಿಧಿಯಿಲ್ಲ. ಬದುಕು ಇರೋದೆ ಹಾಗೆ. ಅದರಲ್ಲು ಹೆಣ್ಣುಮಕ್ಕಳಿಗೆ ಇನ್ನೂ ಜಾಸ್ತಿ. ಮಲ್ಟಿ ಟಾಸ್ಕಿಂಗ್ ಮಾಡದೆ ನಾವು ಕಾಂಪಿಟೇಟಿವ್ ಆಗಲಾರೆವು. ನಾವೆಷ್ಟೇ ಲಿಬರೇಟೆಡ್ ಆದ್ರೂ ಇನ್ನೂ ನಮ್ಮ ಸೊಸೈಟಿ ಮೇಲ್ ಮೆಂಟಾಲಿಟಿಯಿಂದ ಹೊರಬಂದಿಲ್ಲ' ಎಂದ ಅವಳ ಮಾತುಗಳ ಓಘವನ್ನು ಭರಿಸಲಾಗಲಿಲ್ಲ.

'ಓಕೆ ರಾಗಿಣಿ... ಮತ್ಯಾವಾಗಾದ್ರು ಕಾಲ್ ಮಾಡ್ತೀನಿ' ಎನ್ನುವಾಗ ಕಣ್ಣೀರು ಕಪಾಲಕ್ಕಿಳಿಯಿತು. ಪ್ರೋಗ್ರೆಸಿವ್ ವಿಮೆನ್ಸ್ ಫೋರಮ್ಮಿನ ಸೆಕ್ರೆಟರಿ ಇವಳೇನಾ ಅನ್ನುವ